ರೋಗಿಗಳ ಪ್ರಾಣವನ್ನು ಉಳಿಸುವುದಕ್ಕಿಹೊರತು ಬೇರೆಯವರ ಮಾನ ಹರಣಮಾಡುವುದಕ್ಕಲ್ಲ. ಈ ವೈದ್ಯರಿಗೆ ಇದೊಂದು ಹವ್ಯಾಸವಾಗಿದೆ.ಮಾಲೂರಿನ ಜನರು ಬಹಳ ಶಾಂತಸ್ವಭಾವದವರು. ದುಡುಕಿ ಅವರು ಯಾವುದೇ ರೀತಿಯ ಅಚಾತುರ್ಯವನ್ನೂ ಮಾಡುವುದಕ್ಕೆ ಹೋಗಿಲ್ಲ. ಒಂದುವೇಳೆ ಅಲ್ಲಿ ಸೇರಿದ್ದಂಥ ಜನರು ತಮ್ಮ್ಮಮನಸ್ಸಿನ ಸ್ಥೈರ್ಯವನ್ನುಕಳೆದುಕೊಂಡು ಆಸ್ಪತ್ರೆಗೆ ಅಥವಾ ಪೋಲಿಸ್ ಸ್ಟೇಷನ್‌ಗೆ ನುಗ್ಗಿ ಏನಾದರೂ ಅಚಾತುರ್ಯವನ್ನು ಮಾಡಿದ್ದಿದ್ದರೆ ಇದಕ್ಕೆ ಯಾರು ಜವಾಬ್ದಾರರಾಗಬೇಕಾಗಿತ್ತು? ಇದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿ ಆ ವೈದ್ಯ ಯಾರಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.ಇಲ್ಲಿ ಸದಸ್ಯರ ಸಮಾಧಾನಕ್ಕೆ ಉಪಚಾರಕ್ಕಾಗಿ ಒಂದು ಹೇಳಿಕೆಯನ್ನು ಕೊಡತಕ್ಕದ್ದು ಬೇಡ. ಈ ಘಟನೆ ಇಲ್ಲಿಗೆ ಮರೆತು ಹೋಗತಕ್ಕದ್ದು ಬೇಡ. ಇದು ಎರಡನೇಸಾರೀ ನಡೆದಿರುವುದರಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ವೈದ್ಯ ಸರ್ಕಾರೀ ಸೇವೆ ಮಾಡಿರತಕ್ಕದ್ದು ಸಾಕು. ಅವರನ್ನು ಈ ಕೂಡಲೇ ಸರ್ಕಾರೀ ಸೇವೆಯಿಂದಲೇ ವಜಾ ಮಾಡಿ, ಸಾಮಾನ್ಯ ಖೈದಿಯ ರೀತಿಯಲ್ಲಿ ಕೈಗೆ ಕೋಳ ತೊಡಿಸಿ ಮಾಲೂರು ಬೀದಿಯಲ್ಲಿ ಮಾತ್ರವಲ್ಲ ಇಡೀ ಮಾಲೂರು ತಾಲೂಕಿನಲ್ಲೆಲ್ಲಾ ಮೆರವಣಿಗೆ ಮಾಡಿಸಬೇಕು. ಈ ರೀತಿ ಮಾಡಿದರೆ ಇಂಥ ಅಮಾನವೀಯ ಕೃತ್ಯವನ್ನು ಮಾಡತಕ್ಕ ಎಲ್ಲ ವೈದ್ಯರಿಗೂ ಹೆದರಿಕೆ ಬರುತ್ತದೆ. ಪೋಲೀಸರು ಆ ಸ್ಥಳಕ್ಕೆ ಹೋಗಿದ್ದಾರೆ. ಅವರೇನಾದರೂ ಅಲ್ಲಿಗೆ ಹೋಗದೇ ಇದ್ದಿದ್ದರೆ ಅನಾಹುತ ನಡೆಯುತ್ತಿತ್ತು. ಈಗಾಗಲೇ ಸರ್ಕಾರಕ್ಕೆ ಇದರ ಬಗ್ಗೆ ವರದಿ ಬಂದಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಸರ್ಕಾರ ಹೇಳಿಕೆಯನ್ನು ಕೊಡಬೇಕು. ಸರ್ಕಾರ ಇವತ್ತು ಆ ವೈದ್ಯರ ವಿರುದ್ಧ ಉಗ್ರ ಕ್ರಮವನ್ನುತೆಗೆದುಕೊಳ್ಳದಿದ್ದರೆ ನಾವು ನಮ್ಮ ಉಗ್ರತೆಯನ್ನು ಇಲ್ಲಿ ಪ್ರದರ್ಶನ ಮಾಡಬೇಕಾಗುತ್ತದೆಂಬ ಎಚ್ಚರಿಕೆಯನ್ನು ತಮ್ಮ ಮುಖೇನ ಸರ್ಕಾರಕ್ಕೆ ಕೊಡಬಯಸುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ನಾವು ಮೊದಲು ಮಾಲೂರಿನ ವಿಷಯವನ್ನು ಮಾತನಾಡುತ್ತೇವೆ ಅನಂತರ ಮಾನ್ಯ ಪ್ರೊಫೆಸರ್‌ರವರು ಮಾತನಾಡಲಿ.

ಶ್ರೀ ಸಿ. ಬೈರೇಗೌಡ : ದಯವಿಟ್ಟು ಈ ವಿಚಾರದಲ್ಲಿ ಸರ್ಕಾರದಿಂದ ಉತ್ತರ ಕೊಡಿಸಿ.

ಉಪಾಧ್ಯಕ್ಷರು : ನಂಜುಂಡಸ್ವಾಮಿಯವರೇ ತಾವು ಮಾತನಾಡಿ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ .....

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ನಾನು ಮಾನ್ಯ ನಂಜುಂಡಸ್ವಾಮಿಯವರಿಗೆ ಕರೆದಿದ್ದೇವೆ. ಅವರು ಮಾತನಾಡಲಿ. ಅನಂತರ ನೀವು ಮಾತನಾಡಿ.

ವಿಷಯ (3) : (ತುಂಗಭದ್ರಾ ಉಪಜಲಾನಯನ ಪ್ರದೇಶದ ಹತ್ತಿರ ಆಂಧ್ರದವರು ಸಮಾನಾಂತರ ಕಾಲುವೆ ತೋಡುತ್ತಿರುವ ಬಗ್ಗೆ)

* ಶ್ರೀ ಎಂ.ಡಿ.ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಉಪಾಧ್ಯಕ್ಷರೆ, ತುಂಗಭದ್ರಾ ಉಪಜಲಾನಯನ ಪ್ರದೇಶದ ಸಂಬಂಧ ಒಂದು ವಿಚಾರವನ್ನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ನೀರಾವರಿ ಬಗ್ಗೆ ಚರ್ಚೆ ಬಂದಾಗಲೂ ನಾನು ಈ ವಿಚಾರವನ್ನು ಹೇಳಿದ್ದೇ. ಆದರೆ ನನಗೆ ಉತ್ತರ ಸಿಕ್ಕಲಿಲ್ಲ ! ಆದರೆ ನಿನ್ನೆ ನನಗೆ ಈ ಒಂದು ಫೋಟೋಗ್ರಾಫ್ ಬಂದಿದೆ. ರಾಯದುರ್ಗ ಎಂದು ಆಂಧ್ರದಲ್ಲಿ ಮೊಳಕಾಲ್ಮುರುವಿನಿಂದ ಮೂವತ್ತು ಕಿಲೋಮಿಟರ್ ದೂರದಲ್ಲಿದೆ. ಅಲ್ಲಿ ಆಂಧ್ರ ಸರ್ಕಾರದವರು ಪ್ಯಾರಲಲ್ ಕ್ಯೆನಾಲ್ ತೆಗೆದು ಡಿವಿಜನ್ ಕಚೇರಿಯನ್ನು ತೆಗೆದಿದ್ದಾರೆ. ಇದಕ್ಕೆ ಕಾರಣ ಮತ್ತೇನು ಇಲ್ಲ, ನಮ್ಮ ಸರ್ಕಾರ ನಿದ್ದೆ ಮಾಡುತ್ತಾ ಇದೆ. ನಮ್ಮ ಸರ್ಕಾರದ ನೀರಾವರಿ ಇಲಾಖೆಯಲ್ಲಿರುವ ಇಂಜಿನೀಯರುಗಳಿಗೆ ಬಚಾವತ್ ವರದಿಯಲ್ಲಿರತಕ್ಕಂಥ ಅಂಶಗಳು ಗೊತ್ತಿಲ್ಲ.ನಮ್ಮ ನ್ಯಾಯವಾದ ಹಕ್ಕೇನಿದೆ 450 ಟಿಎಂಸಿಎಫ್‌ಟಿ ನೀರು ತುಂಗಭದ್ರಾ ಉಪಜಲಾನಯನದಲ್ಲಿ, ಅದರಲ್ಲಿ ನಾವು 320 ಟಿಎಂಪಿ ಎಫ್‌ಟಿ ನೀರನ್ನು ಮಾತ್ರ ಬಳಕೆ ಮಾಡಬೇಕೆನ್ನುವಂಥ ನಿಷೇದ, ಇನ್ನು ನಮ್ಮದೇ ನ್ಯಾಯವಾದ ಪಾಲು ಏನಿದೆ 130 ಟಿಎಂಸಿಎಫ್‌ಟಿ ಅದನ್ನು ನಾವು ಬಳಸಬಾರದು ಏತಕ್ಕೆಂದರೆ ಕಡಪಾ ಕರ್ನೂಲು ಭಾಗದಲ್ಲಿ ಬರಗಾಲ ಬರಬಹುದು ಆದ್ದರಿಂದ ಇದನ್ನು ಕರ್ನಾಟಕದವರು ಹಾಗೆಯೇ ಇಟ್ಟಿರಬೇಕು. ಎನ್ನುವಂಥ ಒಂದು ಅಂಶ ಇದೆ. ಆ ಕಾರಣ ಅಪ್ಪರ್‌ಭದ್ರಾ ಮತ್ತು ಅಪ್ಪರ್ ತುಂಗಾದಲ್ಲಿ ಕೇವಲ 16 ಟಿಎಂಸಿಎಫ್‌ಟಿಯಲ್ಲಿ ಮಾಡುತ್ತೇವೆನ್ನುವ ಮಾಹಿತಿಯನ್ನು ನೀರಾವರಿ ಮಂತ್ರಿಗಳಿಗೆ ನೀರಾವರಿ ಇಂಜಿನೀಯರುಗಳು ಕೊಡುತ್ತಿದ್ದಾರೆ.130 ಟಿಎಂಸಿಎಫ್‌ಟಿ ನಮ್ಮ ನೀರು ಅದರಲ್ಲಿಯೇ ಅಪ್ಪರ್‌ತುಂಗಾನು ಮಾಡುತ್ತಾರಂತೆ, ಅಪ್ಪರ್‌ಭದ್ರಾನುಮಾಡುತ್ತಾರಂತೆ, ಅಂದರೆ ಅಲ್ಲಿ 8 ಟಿಎಂಸಿಎಫ್‌ಟಿ. ಮಿಕ್ಕಿದ್ದು 130 ಟಿಎಂಸಿಎಫ್‌ಟಿ ನೀರನ್ನು ಹಾರಿಸಿಕೊಂಡು ಹೋಗುವುದಕ್ಕೋಸ್ಕರ ಆಂಧ್ರದವರು ಕಾಲುವೆಯನ್ನು ತೋರುವುದಕ್ಕೆ ಪ್ರಾರಂಭಮಾಡುವುದಕ್ಕೆ ಕಚೇರಿಯನ್ನು ಈಗಾಗಲೇ ಸ್ಥಾಪನೆ ಮಾಡಿದ್ದಾರೆ. ಆದ್ದರಿಂದ ಈ ಸರ್ಕಾರ ಸ್ಪಷ್ಟವಾದ ಒಂದು ಹೇಳಿಕೆಯನ್ನು ಈ ಬಗ್ಗೆ ಕೊಡಬೇಕೆಂದು ಅಪೇಕ್ಷೆ ಪಡುವುದೇಕೆಂದರೆ, ಕಾವೇರಿ ನ್ಯಾಯಮಂಡಲಿ 11.2 ಲಕ್ಷಕ್ಕಿಂತ ಹೆಚ್ಚಿಗೆ ನೀರಾವರಿ ಮಾಡಬಾರದೆಂಬ ನಿಶೇದ ಹಾಕಿರುವುದು. ಈ ಬಚಾವತ್ ಆಯೋಗ ನಮ್ಮದೇ ನೀರು 130 ಟಿ ಎಂ.ಸಿ.ಎಫ್.ಟಿ ನೀರನ್ನು ಬಳಸಬಾರದು ಏತಕ್ಕೆಂದರೆ ಆಂಧ್ರದಲ್ಲಿ ಬರಗಾಲ ಬಂದಾಗ ಬೇಕಾಗುತ್ತದೆ ಎನ್ನುವುದು ಒಂದು ಅಂಶ. ಇವೆರಡು ನ್ಯಾಯಸಮ್ಮತವಲ್ಲ. ಮತ್ತೆ ಎರಡು ಆಯೋಗನೂ ಕೆಲಸಮಾಡಿರುವುದು ರಾಷ್ಟ್ರೀಯ ಜಲನೀತಿ ಇಲ್ಲದಿರುವಾಗ. ಯಾವುದೇ ಮಾರ್ಗಸೂಚಿ ಇಲ್ಲದಿರುವಾಗ. ಆ ಕಾರಣ ಇವತ್ತು ಸರ್ಕಾರದವರು ಒಂದು ಘೋಷಣೆ ಮಾಡಬೇಕು. ರಾಷ್ಟ್ರೀಯ ಜಲನೀತಿ ಇಲ್ಲದೆ,ಯಾವುದೇ ನ್ಯಾಯಮಂಡಲಿ ಕೊಟ್ಟಿರುವ ತೀರ್ಪನ್ನು ಕರ್ನಾಟಕ ಸರ್ಕಾರ ತಿರಸ್ಕರಿಸುತ್ತದೆ ಎನ್ನುವಂಥ ಘೋಷಣೆಯನ್ನು ಮಾಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ ಮತ್ತೆ ನೀವು ಈ ರೀತಿ ಭಯಪಟ್ಟು ಮೌನವಾಗಿದ್ದೀರಲ್ಲ, ಆ ಕಾರಣದಿಂದ ತೆಲುಗುಗಂಗಾನಾಲೆ ತೆಗೆಯುತ್ತಿರುವುದು, ಮತ್ತೆ ಈಗ ತುಂಗಭದ್ರಾ ಸಮಾನಾಂತರ ಕಾಲುವೆಯನ್ನು ತೆಗೆಯುವುದಕ್ಕೆ ಹೊರಟಿದ್ದಾರೆ. ಅದಕ್ಕೆ ಇನ್ನೊಂದು